ಬೇಕಾಗುತ್ತದೆ. ಇದು ಸಾಕಷ್ಟು ಕಾಲಾವಕಾಶವನ್ನು ತೆಗೆದುಕೊಳ್ಳುತ್ತದೆ. ಆದಷ್ಟು ಬೇಗ ಯೋಜನಾ ವರದಿಯನ್ನು ತಯಾರಿಸಿ, ಕೇಂದ್ರ ಸರ್ಕಾರದ ಅನುದಾನ ಪಡೆದು ಕಾಮಗಾರಿ ಕೈಗೊಳ್ಳಲಾಗುವುದು.

ಉ) ಯೋಜನಾ ವರದಿ ತಯಾರಿ ಮತ್ತು ಸರ್ಕಾರಗಳ ವಿವಿಧ ಹಂತಗಳಲ್ಲಿ ಮಂಜೂರಾತಿ/ತೀರ್ಮಾನ ಕೈಗೊಳ್ಳಬೇಕಾಗಿರುವುದರಿಂದ, ಪ್ರಸ್ತುತ ಹಂತದಲ್ಲಿ ಕಾಮಗಾರಿ ಪ್ರಾರಂಭಿಸಿ ಪೂರ್ಣಗೊಳಿಸುವ ಬಗ್ಗೆ ನಿಖರವಾಗಿ ಹೇಳಲು ಬರುವುದಿಲ್ಲ.

1232 ಶ್ರೀ ಪುಟ್ಟರಂಗಶೆಟ್ಟಿ ಸಿ. ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಲ್ಲಿ ಚಾಮರಾಜನಗರದಲ್ಲಿ ರೈತರಿಗೆ ಬಿಡುಗಡೆಯಾದ ರಸಗೊಬ್ಬರ ಎಷ್ಟು; ವಿತರಣೆ ಮಾಡಲಾದ ರಸಗೊಬ್ಬರ ಎಷ್ಟು;

ಆ) ಅಸಮರ್ಪಕವಾಗಿ ದಾಸ್ತಾನು ವಿತರಣೆ ಮಾಡಿದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು)

ಅ) ಕಳೆದ ಎರಡು ವರ್ಷಗಳಲ್ಲಿ (2007–08 ಮತ್ತು 2008–09) ಚಾಮರಾಜನಗರ ಜಿಲ್ಲೆಗೆ ಇದ್ದ ಬೇಡಿಕೆ ಮತ್ತು ಸರಬರಾಜಾದ ರಸಗೊಬ್ಬರ ಪ್ರಮಾಣ ಈ ಕೆಳಕಂಡಂತಿದೆ:

(ಪ್ರಮಾಣ ಟನ್‌ಗಳಲ್ಲಿ)

ರಸಗೊಬ್ಬರ	2007–08		2008–09	
	ಬೇಡಿಕೆ	ಸರಬರಾಜು	ಬೇಡಿಕೆ	ಸರಬರಾಜು
ಡಿ.ಎ.ಪಿ.	9000	5924	8434	12507
ಎಂ.ಒ.ಪಿ	10270	10347	17864	18248
ಎನ್.ಪಿ.ಕೆ.	15200	7421	10879	7759
ಯೂರಿಯಾ	22100	18034	32110	22762
ಒಟ್ಟು	**56570**	**41726**	**69287**	**61276**

ಆ) ಜಿಲ್ಲಾಧಿಕಾರಿಯ ಉಸ್ತುವಾರಿಯಲ್ಲಿ ಸಮರ್ಪಕವಾಗಿ ರಸಗೊಬ್ಬರ ವಿತರಣೆ ಮಾಡಲು ಕ್ರಮವನ್ನು ಕೈಗೊಂಡಿರುತ್ತದೆ. ಆದಾಗ್ಯೂ, ಇಂತಹ

ಘಟನೆಗಳು ಜರುಗಿದಲ್ಲಿ ರಸಗೊಬ್ಬರ ನಿಯಂತ್ರಣ ಆದೇಶ 1985ರನ್ವಯ ಇಲಾಖಾ ವತಿಯಿಂದ ಕ್ರಮವನ್ನು ಕೈಗೊಳ್ಳಲಾಗುವುದು.

469 ಶ್ರೀ ಪಾಟೀಲ್ ಎ.ಎಸ್. ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕರ್ನಾಟಕ ಅಪೆಕ್ಸ್ ಬ್ಯಾಂಕಿನಿಂದ ನೆಗೆಟಿವ್ ಎನ್.ಡಿ.ಆರ್. ಹೊಂದಿರತಕ್ಕಂತಹ ಸಹಕಾರಿ ಹಾಗೂ ಖಾಸಗಿ ರಂಗದ ಸಕ್ಕರೆ ಕಾರ್ಖಾನೆಗಳಿಗೆ ಸಾಲ ನೀಡಿರುವುದು ನಿಜವೇ;

ಆ) 1995 ರಿಂದ ಇದುವರೆಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಿಂದ ನೆಗೆಟಿವ್ ಎನ್.ಡಿ.ಆರ್. ಹೊಂದಿರತಕ್ಕಂತಹ ಸಹಕಾರಿ ಹಾಗೂ ಖಾಸಗಿ ರಂಗದ ಯಾವ ಯಾವ ಸಕ್ಕರೆ ಕಾರ್ಖಾನೆಗಳಿಗೆ ಎಷ್ಟು ಎಷ್ಟು ಸಾಲ ನೀಡಲಾಗಿದೆ;

ಇ) ಬ್ಯಾಂಕ್ ಈ ರೀತಿಯಾಗಿ ಸಾಲ ನೀಡಿರುವುದರ ಉದ್ದೇಶವೇನು?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು)

ಅ) ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು ನೆಗೆಟಿವ್ ಎನ್.ಡಿ.ಆರ್. ಹೊಂದಿದ್ದಾಗ್ಯೂ ದುಡಿಯುವ ಬಂಡವಾಳವಾಗಿ ಸಕ್ಕರೆ ದಾಸ್ತಾನನ್ನು ಅಡಮಾನ ಮಾಡಿಕೊಂಡು ಕಬ್ಬು ಬಿಲ್ಲುಗಳನ್ನು ಪಾವತಿಸಲು ಸಾಲ ಮಂಜೂರು ಮಾಡಲಾಗಿರುತ್ತದೆ. ಆದರೆ ಎನ್.ಡಿ.ಆರ್. ನೆಗೆಟಿವ್ ಇರುವ ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ಸಾಲ ನೀಡಿರುವುದಿಲ್ಲ.

ಆ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಇ) ಸಹಕಾರಿ ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುವ ಋತುಮಾನದಲ್ಲಿ ರೈತರಿಂದ ಪಡೆದ ಕಬ್ಬನ್ನು ನುರಿಸಿ ಸಕ್ಕರೆ ಉತ್ಪಾದನೆಯ ನಂತರ, ಅದೇ ಸಕ್ಕರೆ ದಾಸ್ತಾನನ್ನು ಬ್ಯಾಂಕಿಗೆ ಒತ್ತೆಯಾಗಿಟ್ಟುಕೊಂಡು (pledge) ಬ್ಯಾಂಕು ಹಾಗೂ ಸಕ್ಕರೆ ಕಾರ್ಖಾನೆಯ ಜಂಟಿ ಕೀಲಿ ವ್ಯವಸ್ಥೆಯಲ್ಲಿ ರೈತರಿಗೆ ಕಬ್ಬಿನ ಬಿಲ್ಲನ್ನು ಪಾವತಿಸುವ ಉದ್ದೇಶಕ್ಕಾಗಿ ಬ್ಯಾಂಕಿನಿಂದ ದುಡಿಯುವ ಬಂಡವಾಳವಾಗಿ ಸಾಲ ನೀಡಿರುತ್ತದೆ.